

# ಹಳೆ ಬೇರು ಹೊಸ ಚಿಗುರು

## (ಸಾಹಿತ್ಯ ಸಮಾಗಮ)



ಸಂಪಾದಕರು:
ಡಾ.ಅಕ್ಕಮಹಾದೇವಿ.ಎಸ್.ರೊಟ್ಟಿಮಠ
ಪ್ರೊ.ಸುಶೀಲಾದೇವಿ.ಬಿ.ಬೆಟಗೇರಿ
ಪ್ರೊ.ವಿ.ಎಸ್.ಹಿರೇಮಠ

50 ಸ್ವರ್ಣ ಮಹೋತ್ಸವ
ಸ್ಥಾಪನೆ 1973 - 2023

Principal
Dr. B.B. Hegde First Grade College
Kundapura -576201

ಹಳೇಬೇರು ಹೊಸಚಿಗುರು (ಸಾಹಿತ್ಯ ಸಮಾಗಮ)
Collection by Dr. Akkamahadevi S. Rottimath, Prof. Sushil
V. Betgeri and Prof. I. S. Hiremath
Published by: Smt. Annapurna M. Menasagi, on behal
VIDYANIDHI PRAKASHANA, 'Nanasu', J. T.Math Road,
Old Govt. Hospital, SP Gadag Compound GADAG – 582
Phone: 08372 – 277527, 200527
email: vidyanidhiprakashana@gmail.com ⓕvidyanidhi1973

ಪ್ರಕಾಶಕರು: ಜಯದೇವ ಮೈ. ಮೆಣಸಗಿ
ನಾಗರಾಜ ಮೈ. ಮೆಣಸಗಿ
© ಈ ಪುಸ್ತಕದ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ – ಲೇಖಕರು, ಪ್ರಕಾಶಕರು

ಪ್ರಥಮ ಮುದ್ರಣ : 2022

ಪುಟಗಳು : x+174=184
ಕಾಗದ : 70 GSM
ಪ್ರತಿಗಳು : 500

**₹ 175=00**

ಅಧಿಕೃತ ಪುಸ್ತಕ ಮಾರಾಟಗಾರರು:
ಶ್ರೀ ಶಿವಕುಮಾರ ಏಜನ್ಸಿ®
ಸ್ಟೇಶನ್ ರೋಡ, ಮಹೇಂದ್ರಕರ ಸರ್ಕಲ್ ಹತ್ತಿರ
ಮೊದಲನೇ ಅಡ್ಡ ರಸ್ತೆ, ಗದಗ–582 101
ದೂರವಾಣಿ: 08372–200527

ISBN: 978-81-910875-5-2

ಮುಖಪುಟ ವಿನ್ಯಾಸ: ಗುರು ಆರ್ಟ್ಸ್, ಹುಬ್ಬಳ್ಳಿ
ಡಿಟಿಪಿ ಟೈಪಸೆಟ್ಟಿಂಗ್: ಚೈತ್ರಾ ಕಂಪ್ಯೂಟರ್ಸ್, ಗದಗ
ಮುದ್ರಣ: ಮೈಮ ಅಕ್ಷಣ ಮುದ್ರಣ, ಜೆ.ಟಿ.ಮಠ ರೋಡ, ಗದಗ–582 101.

Principal
Dr. B.B. Hegde First Grade College
Kundapura -576201

# 5. ಹಳೆಗನ್ನಡ ಕನ್ನಡ ಸಾಹಿತ್ಯಕ್ಕೆ ರಾಜಾಶ್ರಯದ ಕೊಡುಗೆ

ಂ ರೇಷ್ಮಾ ಶೆಟ್ಟಿ

ದ್ರಾವಿಡ ಭಾಷಾವರ್ಗಕ್ಕೆ ಸೇರಿರುವ ಕನ್ನಡವು ಪ್ರಚಲಿತ ಭಾಷೆಗಳಲ್ಲಿ ಎರಡನೆಯ ಹಳೆಯ ಭಾಷೆ ಎಂದು ತಿಳಿಯಲಾಗಿದೆ. ಈ ಕನ್ನಡ ಭಾಷೆಯ ಸಾಹಿತ್ಯವು ಭಾರತದಲ್ಲಿಯೇ ಮೂರನೆ ಅತಿ ಪ್ರಾಚೀನ ಸಾಹಿತ್ಯಿಕ ಸಂಪ್ರದಾಯವನ್ನು ಹೊಂದಿದೆ. ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ರಾಜಾಶ್ರಯವೇ ಪ್ರಮುಖವಾಗಿದ್ದು, ಆ ಮೂಲಕ ಕವಿಗಳ ಪ್ರತಿಭೆಗೆ ಪ್ರೇರಣೆ ದೊರೆತದ್ದನ್ನು ಕಾಣಬಹುದು. ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನವು ಕಾಕುಸ್ಥವರ್ಮನ ಕಾಲದಲ್ಲಿ ನರಿದಾವಿಳೆ ನಾಡನ್ನು ಆಳುತ್ತಿದ್ದ ಮೃಗೇಶ ಮತ್ತು ನಾಗೇಂದ್ರರು ಕೇಕೆಯ ಪಲ್ಲವರೊಡನೆ ಹೋರಾಡಿ ಜಯಗಳಿಸಿದ ವಿಜ ಅರಸನಿಗೆ ಹಲ್ಮಿಡಿ ಮತ್ತು ಮೂವಳ್ಳಿ ಗ್ರಾಮವನ್ನು ದಾನವಾಗಿ ಕೊಟ್ಟ ವಿಚಾರವನ್ನು ಹೇಳುತ್ತದೆ. ಅಂದರೆ ಶಾಸನಗಳ ಮೂಲಕ ಕೇವಲ ಹೋರಾಡಿದ ಖಲಿಗಳನ್ನಷ್ಟೆ ಪ್ರೋತ್ಸಾಹಿಸದೆ, ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಪ್ರೋತ್ಸಾಹಿಸುವ ಮನಸ್ಥಿತಿ ಯನ್ನು ಕಾಣಬಹುದು. ಆ ನಂತರದಲ್ಲಿ ಕನ್ನಡದ ಮೊದಲ ಉಪಲಬ್ದ ಕೃತಿಯಾದ 'ಕವಿರಾಜಮಾರ್ಗ'ವು ಕವಿಗಳಿಗೆ ರಾಜಮಾರ್ಗವನ್ನು ಹಾಕಿಕೊಟ್ಟ ಲಾಕ್ಷಣಿಕ ಗ್ರಂಥವಾಗಿದೆ. ಈ ಕೃತಿಯ ರಚನೆಕಾರ ಶ್ರೀವಿಜಯನು ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿ ಇದ್ದನೆಂದು ಹೇಳಲಾಗುತ್ತದೆ. ಮಾರ್ಗಕಾರನೇ ಕನ್ನಡದ ನಾಡು-ನುಡಿ, ಗಡಿಯ ಬಗ್ಗೆ ಅಭಿಮಾನದಿಂದ ಹೇಳಿದವನು ಎಂಬುದಕ್ಕೆ 'ಕಾವೇರಿಯಿಂ ಗೋದಾವರಿ ವರಮಿರ್ಪನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾ ವಲಯವಿಲೀನವಿಶದ ವಿಷಯ ವಿಶೇಷಂ', ಇನ್ನೊದೆಡೆ 'ಭಾವಿಸಿದ ಜನಪದಂ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎನ್ನುವುದೇ ಸಾಕ್ಷಿ. ಆತನೇ ತನಗಿಂತ ಮೊದಲು ಕವಿಗಳಿದ್ದರು ಎಂಬುದನ್ನು ಹೇಳಿದ್ದರೂ ಉಪಲಬ್ದವಿಲ್ಲ. ಹೀಗೆ ರಾಜಾಶ್ರಯದಿಂದಲೇ ಪ್ರಾರಂಭವಾದ ಸಾಹಿತ್ಯವು ಹತ್ತನೇ ಶತಮಾನದಲ್ಲಿ ಅತಿ ಹೆಚ್ಚು ಪ್ರಚುರತೆಯನ್ನು ಪಡೆದುಕೊಂಡಿತು. ಹತ್ತನೇ ಶತಮಾನವೆಂದರೆ ಜೈನಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲಘಟ್ಟ, ಚಂಪೂ ಶೈಲಿಯೇ ಪ್ರಮುಖವಾದುದ್ದಾಗಿತ್ತು. ಜೊತೆಗೆ ಸಂಸ್ಕೃತ ಭೂಯಿಷ್ಟವಾದ ಹಳೆಗನ್ನಡ ಭಾಷೆ ಪ್ರಭಾವಶಾಲಿಯಾಗಿತ್ತು. ಈ ಅವಧಿಯಲ್ಲಿ ಜೈನಧರ್ಮ ಹಾಗೂ ರಾಜಾಶ್ರಯದಿಂದ ಕವಿಗಳು ಅದ್ಭುತ ಕೃತಿಗಳನ್ನು ರಚಿಸಿದರು.

Principal